**ಓ ಎಸ್ ನಂಃ 388/2014**

**ಪಿ. ಡಬ್ಲ್ಯೂ ಃ 1**

**ದಿಃ 5.09.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿ 33 ರವರ ಪರ ಶ್ರೀ ಎನ್ ಎಸ್ ವಕೀಲರಿಂದ ಃ**

ನಮ್ಮ ತಾತನ ಹೆಸರು ಹನುಮಯ್ಯ ಎಂದರೆ ಸರಿ. ನಮ್ಮ ಮುತ್ತಾತನ ಹೆಸರು ಲೆಂಕಪ್ಪ ಅಲಿಯಾಸ್ ಲೆಂಕಯ್ಯ ಎಂದರೆ ಸರಿ. ಲೆಂಕಪ್ಪ ಅಲಿಯಾಸ್ ಲೆಂಕಯ್ಯಮತ್ತು ನಂಜಮ್ಮ ಇವರಿಗೆ 3 ಜನ ಗಂಡು ಮಕ್ಕಳು ಎಂದರೆ ಸರಿ. ಅವರ್ಯಾರು ಬದುಕಿಲ್ಲ ಎಂದು ಸಾಕ್ಷಿಹೇಳುತ್ತಾರೆ. ಅವರ ಪೈಕಿ ನಮ್ಮ ತಾತ ಹನುಮಯ್ಯ ದೊಡ್ಡವರು ಎಂದರೆ ನನಗೆ ಗೊತ್ತಿಲ್ಲ. ಚನ್ನಯ್ಯ ಅಲಿಯಾಸ್ ಮೋಟಚನ್ನಯ್ಯ ಮತ್ತು ರಾಮಯ್ಯ ಎಂಬ ಸಹೋದರರು ಇದ್ದರು ಎಂದರೆ ನನಗೆ ಗೊತ್ತಿಲ್ಲ. ನಾವು ಹಾಜರುಪಡಿಸಿದ ಕ್ರಯಪತ್ರ ಮತ್ತು ವಿಲ್ ಗಳಲ್ಲಿ ಅವರು ಇದ್ದ ಬಗ್ಗೆ ಉಲ್ಲೇಖವಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ತಾತ ಹನುಮಯ್ಯನಿಗೆ ಇವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಮೊದಲನೆ ಹೆಂಡತಿ ನಂಜಮ್ಮ ಎಂದರೆ ಸರಿ. 2ನೆ ಹೆಂಡತಿ ಹೆಸರು ಮಹಿಮಕ್ಕ ಎಂದರೆ ಸರಿ. ಮೊದಲನೆಯ ಹೆಂಡತಿ ನಂಜಮ್ಮ ಇವರಿಗೆ ವೆಂಕಟಸ್ವಾಮಯ್ಯ ಎಂಬ ಒಬ್ಬ ಮಗ ಇದ್ದ ಎಂದರೆ ಸರಿ. ವೆಂಕಟಸ್ವಾಮಯ್ಯ ಮತ್ತು ಅಕ್ಕಯಮ್ಮ ಇವರಿಗೆ 7 ಜನ ಮಕ್ಕಳೆಂದರೆ ಸರಿ. ಅವರೆಂದರೆ ಹನುಮಂತಯ್ಯ, ಗಂಗನರಸಮ್ಮ, ಭದ್ರಮ್ಮ, ಮಾರಪ್ಪ, ನಂಜುಂಡಮ್ಮ , ಕೃಷ್ಣಪ್ಪ ಮತ್ತು ಜಿನ್ನಯ್ಯ ಇರುತ್ತಾರೆ. 2ನೆ ಹೆಂಡತಿ ಮಹಿಮಕ್ಕ ಇವರಿಗೆ ರಾಮರಸಯ್ಯ, ಆಂಜನಪ್ಪ, ಮರಿಚನ್ನಯ್ಯ, ತಾತಯ್ಯ ಅಲಿಯಾಸ್ ಲೆಂಕಪ್ಪ ಮತ್ತು ನಂಜಮ್ಮ ಎಂಬ ಮಕ್ಕಳಿದ್ದರು ಎಂದರೆ ಸರಿ. ನಮ್ಮ ತಂದೆ ನಮ್ಮ ತಾತನ 2ನೆ ಹೆಂಡತಿ ಮಹಿಮಕ್ಕನ ಮಗನೆಂದರೆ ಸರಿ. ಚನ್ನಯ್ಯ ಅಲಿಯಾಸ್ ಮೋಟಚನ್ನಯ್ಯ ಇವರಿಗೆ ವೆಂಕಟನರಸಪ್ಪ, ಚಿಕ್ಕರಸಮ್ಮ, ಜಿನ್ನಮ್ಮ, ತಿರುಮಲಮ್ಮ ಮತ್ತು ಚಿಕ್ಕರಸಯ್ಯ ಎಂಬ ಮಕ್ಕಳು ಇರುತ್ತಾರೆ ಎಂದರೆ ಸರಿಯಲ್ಲ.

ನನ್ನ ತಾತನಿಗೆ ಚನ್ನಯ್ಯ ಎಂಬ ತಮ್ಮನಿರುವುದರ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ತಾತನಿಗೆ ರಾಮಯ್ಯ ಎಂಬ ಇನ್ನೊಬ್ಬ ತಮ್ಮನಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರಿಗೆ ಇಬ್ಬರು ಮಕ್ಕಳಿದ್ದರು ಅವರೆಂದರೆ ಹನುಮಂತಯ್ಯ ಮತ್ತು ಚಿಕ್ಕರಸಯ್ಯ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಕುಟುಂಬದ ಎಲ್ಲ ಸದಸ್ಯರ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲೆಂಕಪ್ಪ ಅಲಿಯಾಸ್ ಲೆಂಕಯ್ಯ ಮತ್ತು ನಂಜಮ್ಮ ಇವರಿಗೆ 3 ಜನ ಮಕ್ಕಳಿದ್ದರು ಸಹ ಇಲ್ಲವೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಚಿಕ್ಕರಸಯ್ಯ ಇವರು ಈ ದಾವೆಯಲ್ಲಿ 33 ಪ್ರತಿವಾದಿ ಎಂದರೆ ನನಗೆ ಗೊತ್ತಿಲ್ಲ. ನಾನು ಈ ದಾವೆಯನ್ನು ನಮ್ಮ ಅಣ್ಣ ತಮ್ಮಂದಿರು ಮತ್ತು ದೊಡ್ಡಪ್ಪ ಇವರ ವಿರುದ್ಧ ಹಾಕಿದ್ದೇವೆ. ಈ ದಾವೆಯಲ್ಲಿ ಇರುವ ಎಲ್ಲ ಪ್ರತಿವಾದಿಗಳು ನನಗೆ ಗೊತ್ತು. ಲೆಂಕಪ್ಪ ಅಲಿಯಾಸ್ ಲೆಂಕಯ್ಯ ಇವರು ವ್ಯವಸಾಯ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರಿಗೆ ವ್ಯವಸಾಯ ಹೊರತುಪಡಿಸಿದರೆ ಬೇರೆ ಉದ್ಯೋಗ ಇತ್ತೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಅವರು ವ್ಯವಸಾಯ ಮಾಡುತ್ತಿದ್ದರು ಎಂದರೆ ಇರಬಹುದು ಎಂದು ಸಾಕ್ಷಿ ಹೇಳುತ್ತಾರೆ.

ಲೆಂಕಪ್ಪ ಅಲಿಯಾಸ್ ಲೆಂಕಯ್ಯ , ನಂಜಮ್ಮ ಮತ್ತು ಅವರ 3 ಜನ ಮಕ್ಕಳು ಸೇರಿ ಸ.ನಂ. 25 ರಲ್ಲಿ 24 ಎಕರೆ 7 ಗುಂಟೆಯನ್ನು ದಿನಾಂಕ ಃ 18.09.1916 ರಲ್ಲಿ ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸ.ನಂ. 25/5 ಮತ್ತು ಸ.ನಂ. 25/7 ಎ ಮೊದಲು ಸ.ನಂ. 25 ರ ಭಾಗವಾಗಿದ್ದವು ಎಂದರೆ ಸರಿ. ಆ ಸ್ವತ್ತುಗಳು ನಮ್ಮ ಕುಟುಂಬಕ್ಕೆ ಯಾವ ರೀತಿ ಬಂದಿದ್ದವು ಎಂದು ತಿಳಿದುಕೊಂಡಿಲ್ಲ. ನಮ್ಮ ತಾತ ದೊಡ್ಡ ಮಗನಾಗಿದ್ದರಿಂದ ಕ್ರಯಪತ್ರವನ್ನು ಅವರ ಹೆಸರಿಗೆ ಮಾಡಿಸಿದ್ದರು ಎಂದರೆ ನನಗೆ ಗೊತ್ತಿಲ್ಲ, ಆ ಸ್ವತ್ತನ್ನು ಒಟ್ಟು ಕುಟುಂಬದ ಪರವಾಗಿ ಕ್ರಯಕ್ಕೆ ತೆಗೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಲೆಂಕಪ್ಪ ಇವರ 3 ಜನ ಮಕ್ಕಳ ಮದ್ಯೆ ಲೆಂಕಪ್ಪ ಇವರು ಬದುಕಿದ್ದಾಗ ಅಥವಾ ಇಲ್ಲಿಯವರೆಗೆ ಯಾವುದೆ ಭಾಗ ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ.

ದಿನಾಂಕ ಃ 15.09.1930 ರಲ್ಲಿ ಲೆಂಕಪ್ಪ ಮತ್ತು ಅವರ 3 ಜನ ಮಕ್ಕಳು ಸೇರಿ ಹನುಮಂತಯ್ಯನ ಮಗ ಕೆಂಚಯ್ಯ ಇವರಿಗೆ ಸ.ನಂ. 25 ರ ಕೆಲವು ಭಾಗಗಳನ್ನು ಮಾರಾಟ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಕ್ರಯಪತ್ರದಲ್ಲಿ ಆ ಸ್ವತ್ತು ಒಟ್ಟು ಕುಟುಂಬದ ಸ್ವತ್ತು ಅದನ್ನು ನಮ್ಮ ದರ್ದು ನಿಮಿತ್ತವಾಗಿ ಮಾರಾಟ ಮಾಡುತ್ತಿದ್ದೇವೆ ಎಂದು ಬರೆದಿದೆ ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲ

ವಿಷಯ ನನಗೆ ಗೊತ್ತಿದ್ದರೂ ಸಹ ಗೊತ್ತಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ. 25 ರಲ್ಲಿ 5 ಎಕರೆ ಸ್ವತ್ತನ್ನು ದಿನಾಂಕ ಃ 12.06.1928 ರಲ್ಲಿ ಭದ್ರಮ್ಮ ಇವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ಎಲ್ಲ ಕ್ರಯಪತ್ರಗಳಲ್ಲಿಯೂ ನಮ್ಮ ತಾತ ಮತ್ತು ಅವರ ಮಕ್ಕಳು ಆ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳೆಂದು ಬರೆಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಇದೆ ಸ,ನಂ. ಉಳಿದ ವಿಸ್ತೀರ್ಣದಲ್ಲಿ ನಮ್ಮ ತಾತ ಮತ್ತು ಅವರ ಮಕ್ಕಳು ವ್ಯವಸಾಯ ಮಾಡಿಕೊಂಡು ಒಳ್ಳೆಯ ಆದಾಯ ಹೊಂದಿದ್ದರು ಎಂದರೆ ನನಗೆ ಗೊತ್ತಿಲ್ಲ.

ದಿನಾಂಕಃ 8.07.1930 ರಲ್ಲಿ ಅನಂತನಾರಾಯಣಪ್ಪ ಮತ್ತು ರಾಮಕೃಷ್ಣಪ್ಪ ಇವರಿಂದ ಸ.ನಂ. 32/2 ರಲ್ಲಿ 3 ಎಕರೆ 20 ಗುಂಟೆ, ಸ.ನಂ. 33/1 ರಲ್ಲಿ 14 ಗುಂಟೆ, ಸ.ನಂ. 35 ರಲ್ಲಿ 2 ಎಕರೆ 2 ಗುಂಟೆ, ಸ.ನಂ. 36 ರಲ್ಲಿ 1 ಎಕರೆ 12 ಗುಂಟೆ ಮತ್ತು ಸ.ನಂ. 34/2 ರಲ್ಲಿ 2 ಎಕರೆ 20 ಗುಂಟೆ ಯಲಚಗುಪ್ಪೆಯಲ್ಲಿರುವ ಜಮೀನುಗಳನ್ನು ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸ.ನಂ. 14/1 ರಲ್ಲಿ 3 ಎಕರೆ 3 ಗುಂಟೆ, ಸ.ನಂ. 32/2 ರಲ್ಲಿ 1 ಎಕರೆ 22 ಗುಂಟೆ, ಸ.ನಂ. 15 ರಲ್ಲಿ 15 ಗುಂಟೆ ಯಲಚುಗುಪ್ಪೆ ರಾಮ್‌ಪುರ ಎಲ್ಲೆ ಯಲ್ಲಿರುವ ಜಮೀನುಗಳನ್ನು ಅದೇ ಕ್ರಯಪತ್ರದಲ್ಲಿ ಕೊಂಡು ಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ, ಈ ಎಲ್ಲ ಸ್ವತ್ತುಗಳನ್ನು ಒಟ್ಟು ಕುಟುಂಬದ ಆದಾಯದಿಂದ ಕೊಂಡುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದೇ ಸ್ವತ್ತುಗಳನ್ನು ಐಟಂ ನಂಬರ್ 1 ರಿಂದ 10 ಎಂದು ದಾವೆಯಲ್ಲಿ ತೋರಿಸಿದ್ದೇವೆ ಎಂದರೆ ಸಾಕ್ಷಿ ಇರಬಹುದು ಎಂದು ಹೇಳುತ್ತಾರೆ. ಈ ಸ್ವತ್ತುಗಳು ಲೆಂಕಪ್ಪ ಇವರ 3 ಜನ ಮಕ್ಕಳ ಮದ್ಯೆ ವಿಭಾಗ ಆಗಿದೆಯೇ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಆ ಸ್ವತ್ತುಗಳನ್ನು ಲೆಂಕಪ್ಪ ಇವರ 3 ಜನ ಮಕ್ಕಳು ಜಂಟಿ ಸ್ವಾಧೀನದಲ್ಲಿದ್ದು ಜಂಟಿ ಮಾಲೀಕರಾಗಿದ್ದಾರೆ ಎಂದರೆ ಸರಿಯಲ್ಲ. ಈ ಎಲ್ಲ ವಿಷಯ ನನಗೆ ಗೊತ್ತಿದ್ದರೂ ಸಹ ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸ.ನಂ. 25 ನ್ನು ವಿಲೆ ಮಾಡುವ ಸಂಪೂರ್ಣ ಅಧಿಕಾರ ನಮ್ಮ ತಾತನಿಗೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಾತ ಹನುಮಯ್ಯ ಇವರು ದಿನಾಂಕ ಃ 15.08.1967 ರಂದು ಭದ್ರಮ್ಮ ಇವರಿಗೆ ಸ್ವತ್ತನ್ನು ಸೇರಿಸಿ ನಮ್ಮ ಮುತ್ತಾತನ ಉಳಿದಿಬ್ಬರು ಮಕ್ಕಳಿಗೆ ಗೊತ್ತಿಲ್ಲದಂತೆ ವಿಲ್ ಮಾಡಿದ್ದಾರೆ ಎಂದರೆ ಸರಿಯಲ್ಲ. ನಮ್ಮ ತಾತನಿಗೆ ಆ ರೀತಿ ವಿಲ್ ಮಾಡುವ ಸಂಪೂರ್ಣ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಮುತ್ತಾತನ ಉಳಿದ ಮಕ್ಕಳಿಗೆ ಆಸ್ತಿಯಲ್ಲಿ ಭಾಗ ಕೊಡಬಾರದು ಎಂಬ ಕಾರಣಕ್ಕೆ ನಮ್ಮ ತಂದೆ ಹಾಗೂ ಅವರ ಸಹೋದರರು ಸೇರಿ 1967 ರಲ್ಲಿ ಮೇಲೆ ಹೇಳಿದ ವಿಲ್ ನ್ನು ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ. 1967 ರ ವಿಲ್ ಪ್ರಕಾರ ಆ ಆಸ್ತಿ ಪಡೆದವರ ಹೆಸರಿನಲ್ಲಿ ಖಾತೆಗಳು ಆಗಿಲ್ಲ ಎಂದರೆ ಸರಿಯಲ್ಲ. ವಿಲ್ ನಲ್ಲಿರುವ 2 ಆಸ್ತಿಗಳಲ್ಲಿ ಲೆಂಕಪ್ಪ ಇವರ 3 ಜನ ಮಕ್ಕಳಿಗೆ

ಸಮಭಾಗ ಇತ್ತು ಎಂದರೆ ಸರಿಯಲ್ಲ. ಯಲಚುಗುಪ್ಪೆ ಗ್ರಾಮ ಜೋಡಿ ಗ್ರಾಮ ಎಂದರೆ ನನಗೆ ಗೊತ್ತಿಲ್ಲ, ಈ ವಿಷಯ ನನಗೆ ಗೊತ್ತಿದ್ದರೂ ಸಹ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಹೆಚ್ ಎಸ್ ರಾಮ್‌ರಾವ್, ಹೆಚ್ ಎಸ್ ಸೂರ್ಯನಾರಾಯಣ ಮತ್ತು ಹೆಚ್ ಎಸ್ ಶೇಷಗಿರಿರಾವ್ ಎಂಬ ಭೂ ಮಾಲೀಕರ ಬಳಿ ಲೆಂಕಪ್ಪ ಇವರು ಸ.ನಂ. 31 ರಲ್ಲಿ 1 ಎಕರೆ 13 ಗುಂಟೆ, ಸ.ನಂ. 33 ರಲ್ಲಿ 3 ಎಕರೆ 9 ಗುಂಟೆ , ಸ.ನಂ. 34/1 ರಲ್ಲಿ 15 ಗುಂಟೆ, ಸ.ನಂ. 37 ರಲ್ಲಿ 1 ಎಕರೆ 7 ಗುಂಟೆ ಇವುಗಳನ್ನು ಗೇಣಿದಾರರಾಗಿ ವಾರದ ಲೆಕ್ಕದಲ್ಲಿ ವ್ಯವಸಾಯ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಸ್ವತ್ತುಗಳಲ್ಲಿ ಭಾಗ ಬೇಕೆಂದು ಸೇರಿಸಿದ್ದೇನೆ ಎಂದರೆ ಸರಿ. ಆ ಸ್ವತ್ತುಗಳು ಮೂಲತಃ ನಮ್ಮ ಕುಟುಂಬದ ಸ್ವತ್ತುಗಳಲ್ಲ ಎಂದರೆ ಸರಿಯಲ್ಲ. ಲೆಂಕಪ್ಪ ಇವರು ತೀರಿಕೊಂಡ ನಂತರ ಅವರ 3 ಜನ ಮಕ್ಕಳು ಮೇಲೆ ಹೇಳಿದ ಜಮೀನ್ದಾರರ ಬಳಿ ವಾರದ ಲೆಕ್ಕದಲ್ಲಿ ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

1958 ರಲ್ಲಿ ಹೆಚ್ ಎಸ್ ಶ್ಯಾಮ್ ರಾವ್ ಇವರ ಹೆಂಡತಿ ಪುಟ್ಟಗೌರಮ್ಮ ಇವರು ಲೆಂಕಪ್ಪ ಇವರ 3 ಜನ ಮಕ್ಕಳಿಗೆ ವಾರದ ಪದ್ಧತಿಯಂತೆ ಬೇಸಿಗೆ ಕಟಾವಿನಲ್ಲಿ ವಾರದ ಬೆಳೆಯನ್ನು ಕೊಡತಕ್ಕದ್ದು ಎಂಬ ಒಪ್ಪಂದ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲ ವಿಷಯ ಲೆಂಕಪ್ಪ ಇವರ 3 ಜನ ಮಕ್ಕಳಿಗೆ ಗೊತ್ತಿತ್ತು ಎಂದರೆ

ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಇನಾಂ ರದ್ದತಿ ಕಾಯ್ದೆ ಬಂದ ನಂತರ ಗೇಣಿದಾರರಾಗಿದ್ದ ಲೆಂಕಪ್ಪ ಇವರ 3 ಜನ ಮಕ್ಕಳು ಆ ಜಮೀನುಗಳನ್ನು ಅವರಿಗೆ ಮಂಜೂರು ಮಾಡಬೇಕೆಂದು ಭೂ ನ್ಯಾಯ ಮಂಡಳಿಯಲ್ಲಿ ಅರ್ಜಿ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ನಂತರ ಆ ಸ್ವತ್ತುಗಳನ್ನು ಲೆಂಕಪ್ಪ ಮತ್ತು ಅವರ ಮಕ್ಕಳಿಗೆ ಮಂಜೂರಾಗಿದ್ದವು ಎಂದರೆ ನನಗೆ ಗೊತ್ತಿಲ್ಲ. ಮರಿಚನ್ನಯ್ಯ ಇವರು ಕುಟುಂಬದ ಎಲ್ಲ ಸದಸ್ಯರ ಪರವಾಗಿ ಗೇಣಿ ಅರ್ಜಿಯನ್ನು ಸಲ್ಲಿಸಿದ್ದಾರೆಂದರೆ ನನಗೆ ಗೊತ್ತಿಲ್ಲ. ಈ ಎಲ್ಲ ಸ್ವತ್ತುಗಳು ಗೇಣಿ ಅರ್ಜಿಯ ಮೂಲಕ ಮಂಜೂರಾದ ಸ್ವತ್ತುಗಳೆಂದರೆ ನನಗೆ ಗೊತ್ತಿಲ್ಲ. ಹೀಗೆ ಮಂಜೂರಾದ ಜಮೀನುಗಳಲ್ಲಿ ಲೆಂಕಪ್ಪ ಇವರ 3 ಜನಮಕ್ಕಳಿಗೆ ಸಮಭಾಗ ಇದೆ ಎಂದರೆ ಸರಿಯಲ್ಲ.

ಚನ್ನಯ್ಯ ಅಲಿಯಾಸ್ ಮೋಟಚನ್ನಯ್ಯ ಮತ್ತು ರಾಮಯ್ಯ ಇವರ ವಾರಸುದಾರರಿಗೆ

ಗೊತ್ತಿಲ್ಲದಂತೆ ಎಲ್ಲ ದಾವಾ ಸ್ವತ್ತುಗಳನ್ನು ಹೊಡೆದುಕೊಳ್ಳಬೇಕೆಂಬ ಉದ್ದೇಶದಿಂದ ಹನುಮಯ್ಯ ಇವರ ಕುಟುಂಬದ ಸದಸ್ಯರನ್ನು ಸೇರಿಸಿಕೊಂಡು ಒಂದು ಸುಳ್ಳು ದಾವೆ ಮಾಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಇವತ್ತಿಗೂ ಸಹ ಲೆಂಕಪ್ಪ ಇವರ 3 ಜನ ಮಕ್ಕಳ ವಾರಸುದಾರರು ಜಂಟಿ ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ದಿನಾಂಕ ಃ 8.04.2013 ರಂದು ಹನುಮಯ್ಯ ಇವರ ವಾರಸುದಾರರ ಸೇರಿ ಉಳಿದವರಿಗೆ ಮೋಸ ಮಾಡಬೇಕೆಂಬ ಉದ್ದೇಶದಿಂದ ವಿಭಾಗಪತ್ರವನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಅದರಲ್ಲಿ ಲೆಂಕಪ್ಪ ಇವರ ಉಳಿದಿಬ್ಬರ ಮಕ್ಕಳಿಗೆ ಯಾವುದೆ ಭಾಗ ಕೊಟ್ಟಿಲ್ಲ ಎಂದರೆ ನನಗೆ ಗೊತ್ತಿಲ್ಲ.

**ಪ್ರತಿವಾದಿ 25 ರವರ ಪರವಾಗಿ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**